# ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,**
**ವಾರ್ಡ್ ನಂ.72, ಹೇರೋಹಳ್ಳಿ, ಬೆಂಗಳೂರು-5600 91.**

---

ಸಂಖ್ಯೆ: .ಸ.ಕಾ.ನಿ.ಅ: ಹೇ.ಉ.ವಿ: ಪಿಆರ್/23/2020-21 ದಿನಾಂಕ : 07-08-2021

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.72ರಲ್ಲಿ ದಿನಾಂಕ: 07.08.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಹಾಜರಾಗಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 01 | ಶ್ರೀ. ಎಸ್ ಆರ್ ಪ್ರಕಾಶ್ | ವಾರ್ಡ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು. |
| 02 | ಶ್ರೀ ಚಿತ್ತಯ್ಯ | ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ ವಾರ್ಡ.72 ಹೇರೋಹಳ್ಳಿ. |
| 03 | ಶ್ರೀ ರಾಜೀವ್ | ಪೋಲೀಸ್ ನಿರೀಕ್ಷಕರು, ಬ್ಯಾಡರಹಳ್ಳಿ ಪೊಲೀಸ್ ಠಾಣೆ. |
| 04 | ಶ್ರೀ ಮಹಾಂತೇಶ್ | ಕಿರಿಯ ಅಭಿಯಂತರರು, ಬೆಸ್ಕಾಂ. |
| 05 | ಶ್ರೀ ಜಯರಾಮ್ | ಕಿರಿಯ ಅಭಿಯಂತರರು, ಬೆಸ್ಕಾಂ. |
| 06 | ಶ್ರೀ ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು. |
| 07 | ಶ್ರೀ ಕುಮಾರ್ | ಕಂದಾಯ ಪರಿವೀಕ್ಷಕರು, ಹೇರೋಹಳ್ಳಿ. |
| 08 | ಶ್ರೀ ವಿಜಯ | ಕಿರಿಯ ಆರೋಗ್ಯ ಪರಿವೀಕ್ಷಕರು. |
| 09 | ಶ್ರೀ ರಮೇಶ್ | ಪಶು ವೈದ್ಯರು. |
| 10 | ಶ್ರೀ ಪ್ರದೀಪ್ | ಆರೋಗ್ಯ ಪರಿವೀಕ್ಷಕರು, ಸರ್ಕಾರಿ ಆಸ್ಪತ್ರೆ |
| 11 | ಶ್ರೀ ಮರಿಯಪ್ಪ | ಮೇಲ್ವಿಚಾರಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 12 | ಶ್ರೀ ಶ್ರೀಕಾಂತ್ | ಮೇಲ್ವಿಚಾರಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 13 | ಶ್ರೀ ಮುತ್ತಪ್ಪ | ವಾರ್ಡ ಸಮಿತಿ ಸದಸ್ಯರು. |
| 14 | ಶ್ರೀ ಸಿ.ಬಿ.ನರಸೇಗೌಡ | ವಾರ್ಡ ಸಮಿತಿ ಸದಸ್ಯರು. |
| 15 | ಶ್ರೀ ನಿಖಿಲ್ ಗೌಡ | ವಾರ್ಡ ಸಮಿತಿ ಸದಸ್ಯರು. |
| 16 | ಶ್ರೀ ಲೋಕೇಶ್ | ವಾರ್ಡ ಸಮಿತಿ ಸದಸ್ಯರು. |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಎಸ್ ಆರ್ ಪ್ರಕಾಶ್ ರವರು ಮತ್ತು ಸಹಾಯಕ ಅಭಿಯಂತರರು ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಚಿತ್ತಯ್ಯ ರವರು ಸಭೆಗೆ ಹಾಜರಿದ್ದು ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ, ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯಗಳ ಬಗ್ಗೆ ತಿಳಿಸಿದರು.

**ಕಾಮಗಾರಿ ಇಲಾಖೆಗೆ ಚರ್ಚಿಸಲಾದ ವಿಷಯಗಳು:-**

ವಾರ್ಡ್ ಸಂಖ್ಯೆ :72ಕ್ಕೆ ಸಂಬಂಧಿಸಿದಂತೆ, ಶ್ರೀ ಮುತ್ತಪ್ಪ, ಸ್ಥಳೀಯ ನಿವಾಸಿಗಳು ಮಾತನಾಡಿ ಬಿ.ಇ.ಎಲ್ ಬಡಾವಣೆಯಲ್ಲಿ ಒಳಚರಂಡಿ ಕಾಮಗಾರಿ ನಡೆಯುವಾಗ ಹಾಗೂ 15ನೇ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬ ಹಾಕುವಾಗ ಗುಂಡಿ ಬಿದ್ದಿರುತ್ತದೆ, ಎಂದು ಸಭೆಯಲ್ಲಿ ಸೂಚಿಸಿದರು.

**ಆರೋಗ್ಯ ಇಲಾಖೆ ವೈದ್ಯಾಧಿಕಾರಿಗಳಿಗೆ:-**

ಆರೋಗ್ಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಕೋವಿಡ್-19 ಪ್ರಯುಕ್ತ ಕಾರ್ಯನಿರ್ವಹಿಸುತ್ತಿದ್ದು, ಈಗಾಗಲೇ ವಾರ್ಡ್ ಮಟ್ಟದಲ್ಲಿ ಕೋವಿಡ್-19 ಪ್ರಕರಣಗಳು ಬಹಳಷ್ಟು ಇಳಿಮುಖವಾಗಿದ್ದು, ಒಟ್ಟು ಪ್ರಕರಣಗಳು 4159 ಅದರಲ್ಲಿ 4137 ಪ್ರಕರಣಗಳು ಡಿಸ್ಚಾರ್ಜ್ ಆಗಿದ್ದು, ಆಕ್ಟೀವ್ ಪ್ರಕರಣಗಳು ಹೋಮ್ ಕ್ವಾರಂಟೈನ್ ಆಗಿ 21 ಇರುತ್ತವೆ ಎಂದು ತಿಳಿಸುತ್ತಾ, ಒಟ್ಟು ಮರಣ 103 ಆಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಈಗಾಗಲೇ 12894 ವ್ಯಾಕ್ಸಿನ್ ಚುಚ್ಚುಮದ್ದು, ನೀಡಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ವೃತ್ತವನ್ನು ಗುರುತಿಸಿಕೊಂಡು ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಅನ್ನು ನೀಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು..

**ಬಿ.ಬಿ.ಎಂ.ಪಿ ಆರೋಗ್ಯ ಇಲಾಖೆ**

ತುಂಗಾನಗರ ಮುಖ್ಯ ರಸ್ತೆಯಲ್ಲಿ ಕಸ ಹಾಕುತ್ತಿದ್ದಾರೆ ಎಂದು ಸ್ಥಳೀಯ ನಿವಾಸಿಗಳು ಶ್ರೀ ವಿಜಯ್. ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಿದರು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

ಸ್ಥಳೀಯ ನಿವಾಸಿ ಮುತ್ತಪ್ಪ ಮಾತನಾಡಿ. ಬಿ.ಇ.ಎಲ್ ಬಡಾವಣೆಯ ವ್ಯಾಪ್ತಿಯಲ್ಲಿ ಕಾವೇರಿ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ ಎಂದು  ಸಭೆಯಲ್ಲಿ ಸೂಚಿಸಿದರು. ಮತ್ತು ಸ್ಥಳೀಯ ನಿವಾಸಿಗಳಾದ ಶ್ರೀ ಲೋಕೇಶ್ ರವರು ಮಾತನಾಡಿ ವಾರ್ಡ 72. ಹೇರೋಹಳ್ಳಿ. ನಾಗರಹೊಳೆ. ಮಾರುತಿ ನಗರ. ಮಹದೇಶ್ವರ ನಗರ ವ್ಯಾಪ್ತಿಯ ಮನೆಗಳಿಗೆ 2000 ಲೀಟರ್ ನೀರು ನೀಡಲಾಗುತ್ತಿದ್ದು. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಕೆ ಆಗಬೇಕೆಂದು ಸಭೆಯಲ್ಲಿ ಸೂಚಿಸಿದರು

**ಬೆಸ್ಕಾಂ:-**

ಸ್ಥಳೀಯ ನಿವಾಸಿಗಳಾದ ಶ್ರೀ ಮುತ್ತಪ್ಪ. ಶ್ರೀ ಲೋಕೇಶ್. ಶ್ರೀ ನಿಖಿಲ್ ಗೌಡ ಇತರ ಸ್ಥಳೀಯ ನಿವಾಸಿಗಳು ಮಾತನಾಡಿ. ಬೆಸ್ಕಾಂ ವತಿಯಿಂದ ಬಿ.ಇ.ಎಲ್ ಬಡಾವಣೆ. ಎಸ್.ಎಮ್.ವಿ 7&8ನೇ ಬಡಾವಣೆ. ಹಾಗೂ ಇತರ ಬಡಾವಣೆಗಳಲ್ಲಿ ಭೂಗತ ಕೇಬಲ್ ಅನ್ನು ಆಳಕ್ಕೆ ಹಾಕದೇ ಮೇಲ್ಭಾಗದಲ್ಲಿ ಹಾಕುತ್ತಿದ್ದಾರೆ ಎಂದು ಸೂಚಿಸಿದರು.

ಸ್ಥಳೀಯ ನಿವಾಸಿಗಳಾದ ನಿಖಿಲ್ ಗೌಡ ರವರು ಮಾತನಾಡಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಭಾಗವಹಿಸಲು ಸೂಚಿಸಿದರು. ಮತ್ತು ತೋಟಗಾರಿಕೆ ಇಲಾಖೆ. ಕೆರೆ ವಿಭಾಗ. ಅರಣ್ಯ ವಿಭಾಗ ಈ ಅಧಿಕಾರಿಗಳ ಮೇಲೆ ನೋಟೀಸ್ ನೀಡಿ ಮಾನ್ಯ ಆಯುಕ್ತರ ಗಮನಕ್ಕೆ ತರಲು ಸೂಚಿಸಿದರು.

**ಪಶುವೈದ್ಯಕೀಯ ಇಲಾಖೆ:-**

ವಾರ್ಡ್ 72 ರ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಬೀದಿನಾಯಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ದೂರುಗಳು ಬರುತ್ತಿದ್ದು. ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಸಂಬಂಧಿಸಿದ ಇಲಾಖೆಗೆ ಸೂಚಿಸಲಾಯಿತು.

**ಪೊಲೀಸ್ ಇಲಾಖೆ:-**

ಸಾರ್ವಜನಿಕರು ಬೆಳಗ್ಗೆ ಮತ್ತು ಸಾಯಂಕಾಲ ಉದ್ಯಾನವನಗಳಲ್ಲಿ ವಾಯು ವಿಹಾರ ಮಾಡುತ್ತಿರುವಾಗ ಒಂಟಿ ಮಹಿಳೆಯರು ಮತ್ತು ಮಕ್ಕಳ ಆಭರಣಗಳು ಕಳವಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿದ್ದು. ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಸಂಬಂಧಿಸಿದ ಇಲಾಖೆಗೆ ಸೂಚಿಸಲಾಯಿತು.

**ಅಧ್ಯಕ್ಷರು ಮಾತನಾಡುತ್ತಾ. ಮುಂದಿನ ಸಭೆಯಲ್ಲಿ ತೋಟಗಾರಿಕೆ ಅಧಿಕಾರಿಗಳು. ಅರಣ್ಯಾಧಿಕಾರಿಗಳು ಮತ್ತು ಕೆರೆಗಳ ವಿಭಾಗ ಅಧಿಕಾರಿಗಳು ಕಡ್ಡಾಯವಾಗಿ ಸಭೆಗೆ ಹಾಜರಿರಲು ತಿಳಿಸಿದರು.**

**ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.**

7/8/21

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 72. ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ 72 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.